

**ಬಾಲಸುಬ್ರಹ್ಮಣ್ಯ ಕಂಜರ್ಪಣೆ**

ಚಿತ್ರಗಳು: ದಿನೇಶ್ ಮಾನೀರ್

ವರ್ತಮಾನದ ವಿದ್ಯಮಾನಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದ ಶ್ರೀನಿವಾಸ ವೈದ್ಯರು, ಬರವಣಿಗೆಯಲ್ಲಿ ಒತ್ತು ನೀಡಿದ್ದು ವಿನೋದಕ್ಕೆ. ತಮ್ಮ ಹೆಸರಿನಲ್ಲಿನ 'ವೈದ್ಯ' ಗುಣವನ್ನು ಬರಹದ ಭಾಗವಾಗಿಸಿದ್ದರು. ಸಾಮಾಜಿಕ ಸಂಗತಿಗಳಿಂದ ವೈಯಕ್ತಿಕವಾಗಿ ನೊಂದರೂ, ಸಾರ್ವತ್ರಿಕವಾಗಿ ನಲಿವು ಹಂಚುವುದು ಅವರ ಬದುಕು–ಬರಹದ ಶೈಲಿಯಾಗಿತ್ತು. ಗಂಭೀರ ಸಂಗತಿಗಳನ್ನೂ ವಿನೋದದ ಸ್ಪರ್ಶದಲ್ಲಿ ನಿರೂಪಿಸುತ್ತಿದ್ದ ವಿಶಿಷ್ಟ ಶೈಲಿ ಅವರ ಬರವಣಿಗೆಯದು. ನಿವೃತ್ತಿಯ ನಂತರ ಬರವಣಿಗೆಯನ್ನು ಗಂಭೀರವಾಗಿ ಹಚ್ಚಿಕೊಂಡ ವೈದ್ಯರು, ತಮ್ಮ ಅನುಭವದ ಸಾರವನ್ನೆಲ್ಲ ಕೃತಿಗಳಲ್ಲಿ ತುಂಬಿಕೊಟ್ಟರು. ಶ್ರೀನಿವಾಸ ವೈದ್ಯರ ನಿಧನದ (ಏ. 21) ಮೂಲಕ, ಕನ್ನಡ ಸಾಹಿತ್ಯ ಲೋಕದ ಪ್ರೌಢ ಅಧ್ಯಾಯವೊಂದು ನೆನಪಿನ ಪುಟಗಳಿಗೆ ಸಂದಿದೆ.



# ಶ್ರೀನಿವಾಸ ವೈದ್ಯ

## ಅಳುವುದಕ್ಕೆ ಕಾರಣಗಳಿದ್ದರೂ ನಗುತ್ತಲೇ ಬದುಕಿದವರು